ದಿನದ ಪಟ್ಟಿಯಲ್ಲಿ ಸೇರಿಸಲ್ಪಾದ ಪ್ರಶ್ನೋತ್ತರಗಳು

ಜಿಲ್ಲಾ ಪರಿಷತ್ ಹಾಗೂ ಮಂಡಲ ಪಂಚಾಯಿತಿ ಸದಸ್ಯರಂಗಳ ಸಮ್ಮೇಳನಕ್ಕಾದ ಬಗ್ಗೆ.

೧೩೭೨. ಶ್ರೀ ರಾಮದಾಸ್ (ಹೊಸದುರ್ಗ).—ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಆಹಾರ ಹಾಗೂ ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿ ಸದಸ್ಯರಂಗಳ ಸಮ್ಮೇಳನಕ್ಕೆ ಆಗಮಿಸಿದ ಪ್ರತಿನಿಧಿ ಸದಸ್ಯರಿಗೆ ಪ್ರಯಾಣ ಭತ್ಯ ನೀಡಲಾಯಿತೆ?

ಆ) ಹಾಗಿದ್ದಲ್ಲಿ ಈ ಅಧಿವೇಶನಕ್ಕೆ ಆಗಮಿಸಿದ ಅಧಿಕೃತ ಪ್ರತಿನಿಧಿಗಳೆಷ್ಟು. ಇವರಿಗೆ ನೀಡಿದ ಪ್ರಯಾಣದ ಹಣವೆಷ್ಟು ಹಾಗೂ ಒಟ್ಟಾರೆ ಸರ್ಕಾರಕ್ಕೆ ಇದಕ್ಕಾಗಿ ಎಷ್ಟು ಹಣ ಖರ್ಚಾಯಿತು ?

ಇ) ಹೊಸದುರ್ಗ ತಾಲ್ಲೂಕಿನಿಂದ ಎಷ್ಟು ಪ್ರತಿನಿಧಿಗಳು ಆಗಮಿಸಿದ್ದರು. ಹಾಗೂ ಇವರ ಖರ್ಚಿಗಾಗಿ ಸರ್ಕಾರ ಎಷ್ಟು ಹಣ ನೀಡಿತು ?

ಈ) ಇಂತಹ ಸದಸ್ಯರ ಖರ್ಚಿಗೆ ನೀಡಿದ ಹಣದಲ್ಲಿ ಹೊಸದುರ್ಗ ಕಂದಾಯ ಇಲಾಖೆಯಿಂದ ದುರುಪಯೋಗವಾಗಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಉ) ಹಾಗಿದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗುವುದೆ ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಹಾಗೂ ನಾಗರೀಕ ಸರಬರಾಜು ಮಂತ್ರಿಗಳು). ...

ಅ) ಯಾವ ಸಾರಿಗೆ ಭತ್ಯವನ್ನು ಕೊಟ್ಟಿಲ್ಲ. ಆದರೆ ಬೆಂಗಳೂರಿಗೆ ಹೋಗುವ ಮಾರ್ಗದಲ್ಲಿ ಊಟಕ್ಕೆ ಹಣವನ್ನು ಕೊಡಲಾಗಿತ್ತು.

ಆ) ಒಟ್ಟು ೫೫೦೦೦ ಪ್ರತಿನಿಧಿಗಳು ಭಾಗವಹಿಸಿದ್ದರು. ಒಟ್ಟು ೮೮ ಲಕ್ಷ ರೂ.ಗಳನ್ನು ಸಮ್ಮೇಳನಕ್ಕಾಗಿ ಸರ್ಕಾರವು ಮಂಜೂರು ಮಾಡಲಾಗಿತ್ತು.

ಇ) ಹೊಸದುರ್ಗ ತಾಲೂಕಿನಿಂದ ಒಟ್ಟು ೩೦೪ ಪ್ರತಿ ನಿಧಿಗಳು ಭಾಗವಹಿಸಿದ್ದರು. ಚಿತ್ರದುರ್ಗ ಜಿಲ್ಲೆಗೆ ಒಟ್ಟು ೧೧೯೩೫ ರೂ.ಗಳನ್ನು ಬಿಡುಗಡೆ ಮಾಡಲಾಗಿತ್ತು. ಈ ಹಣದಲ್ಲಿ ಸಾರಿಗೆ ವ್ಯವಸ್ಥೆ ಹೊರತಾಗಿದೆ. ಅಲ್ಲದೆ ಹೊಸದುರ್ಗ ತಾಲೂಕಿಗೆ ಸಂಬಂಧಿಸಿದಂತೆ ೧೪೫೦ ರೂ.ಗಳನ್ನು ಖರ್ಚು ಮಾಡಲಾಗಿದೆ.

ಈ) ಕೆಲವು ದೂರುಗಳು ಬಂದಿರುತ್ತವೆ ಮತ್ತು ಜಿಲ್ಲಾಧಿಕಾರಿಗಳು, ದಾವಣಗೆರೆ ಉಪ ವಿಭಾಗಾಧಿಕಾರಿಯವರಿಗೆ ಈ ಬಗ್ಗೆ ವಿಚಾರಣೆ ನಡೆಸಲು ಆದೇಶಿಸಿರುತ್ತಾರೆ.

ಉ) ವರದಿ ಬಂದ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಎರವಲು ಸೇವೆಯ ಮೇಲೆ ಸೇವೆಯಲ್ಲಿರುವ ಪಿ. ಡಬ್ಲ್ಯೂ. ಡಿ. ಮತ್ತು ಟೌನ್ ಪ್ಲಾನಿಂಗ್ ಅಧಿಕಾರಿಗಳ ಬಗ್ಗೆ.

೧೩೭೬. ಶ್ರೀ ಬಸವಲಿಂಗಪ್ಪ (ಯಲಹಂಕ).—ಮಾನ್ಯ ಕಾನೂನು ಸಂಸದೀಯ ವ್ಯವಹಾರ ನಾಗರೀಕ ಸರಬರಾಜು ಮತ್ತು ಆಹಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ನಗರಸಭೆ ಸೇವಾಡಳಿತದಲ್ಲಿ ಸರ್ಕಾರದಿಂದ ಎರವಲಾಗಿ ಕೊಟ್ಟ ಪಿ. ಡಬ್ಲ್ಯೂ. ಡಿ. ಮತ್ತು ಟೌನ್ ಪ್ಲಾನಿಂಗ್ ಅಧಿಕಾರಿಗಳ ಸಂಖ್ಯೆ ಎಷ್ಟು ?

ಆ) ನಗರಸಭೆ ಸೇವೆಗೆ ಹೋದನಂತರ ಅವರ ಮತ್ತು ಅವರ ಸಂಬಂಧಿಗಳ ಹೆಸರಿನಲ್ಲಿ ಮನೆ, ವಾಹನ ಮತ್ತು ಬೇರೆ ರೀತಿಯಲ್ಲಿ ಎಷ್ಟು ಆಸ್ತಿಗಳನ್ನು ಮಾಡಿದ್ದಾರೆ ?

ಇ) ಅವರ ಆಸ್ತಿಗಳ ಬಗ್ಗೆ ಪ್ರತಿವರ್ಷ ಘೋಷಣೆ ಮಾಡಿದ್ದಾರೆಯೇ ?

ಈ) ಅವರಿಂಗಳ ಸಂಖ್ಯೆಗಿಂತ ಸಮಜಾಯಿಷಿ ಕೊಡದಿರುವಷ್ಟು ಆಸ್ತಿಗಳನ್ನು ಮಾಡಿದ್ದಲ್ಲಿ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳಲಾಗಿದೆ ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ, ಸಂಸದೀಯ ವ್ಯವಹಾರ, ನಾಗರೀಕ ಸರಬರಾಜು ಮತ್ತು ಆಹಾರ ಮಂತ್ರಿಗಳು).—

ಅ) ಪಿ ಡಬ್ಲ್ಯೂ. ಡಿ. ಅಧಿಕಾರಿಗಳು — ೭
ಟೌನ್ ಪ್ಲಾನಿಂಗ್ ಅಧಿಕಾರಿಗಳು — ೧

ಆ) ಸದ್ಯದಲ್ಲಿ ಮಾಹಿತಿಯು ಇರುವುದಿಲ್ಲ. ಆದನ್ನು ಪಡೆದು ಒದಗಿಸಲಾಗುವುದು.

ಇ) ನಿಯಮದ ಪ್ರಕಾರ ಸಂಬಂಧಪಟ್ಟವರಿಗೆ ಪ್ರತಿವರ್ಷವೂ ಘೋಷಣೆ ಮಾಡಿರುತ್ತಾರೆ.

ಈ) ಸಮಂಜಾಯಿಷಿ ಕೊಡದಿರುವಷ್ಟು ಆಸ್ತಿಗಳನ್ನು ಮಾಡುವುದು ಕಾನೂನು ಪ್ರಕಾರ ಅಪರಾಧವಾಗುತ್ತದೆ. ಅಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದರೆ ನಿಯಮದ ಪ್ರಕಾರ ಕಾನೂನು ಕ್ರಮ ತೆಗೆದುಕೊಳ್ಳಲಾಗುತ್ತದೆ. ಮತ್ತು ಅಥವಾ ಇಲಾಖಾ ವಿಚಾರಣೆಯನ್ನೂ ಸಹ ಮಾಡಲಾಗುವುದು.

ಹುಮನಾಬಾದ್ ಪಟ್ಟಣಕ್ಕೆ ನೀರಿನ ತೊಂದರೆಯ ಕುರಿತು.

೧೯೭೩. ಶ್ರೀ ಬಸವರಾಜ ಪಾಟೀಲ್ (ಹುಮನಾಬಾದ್).—ಮಾನ್ಯ ಕಾನೂನು, ಸಂಸದೀಯ ವ್ಯವಹಾರ ನಗರಾಭಿವೃದ್ಧಿ ಮತ್ತು ಆಹಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹುಮನಾಬಾದ್ ನಗರಕ್ಕೆ ನೀರಿನ ತೊಂದರೆ ಇದ್ದದ್ದಕ್ಕಾಗಿ ಸರ್ಕಾರದವರು ಹೊಸದಾಗಿ ಮೇಲ್ಮಟ್ಟದ ತೊಟ್ಟಿ ಮತ್ತು ಹೊಸದಾಗಿ ಬಾವಿ ಮಂಜೂರು ಮಾಡಿರುವುದು ನಿಜವೇ ಹಾಗಿದ್ದಲ್ಲಿ ಯಾವಾಗ ?

ಆ) ಅವು ಇನ್ನೂ ಪೂರ್ತಿಗೊಳಿಸದೇ ಇರುವುದಕ್ಕೆ ಕಾರಣಗಳೇನು ?

ಇ) ನಗರ ಸಭೆಯವರು ನೀರಿನ ತೊಟ್ಟಿಯಿಂದ ತೇರು ಮೈದಾನದವರೆಗೆ ಸಿಮೆಂಟ್ ಕೊಳವೆಯನ್ನು ತೆಗೆದು ಲೋಹದ ಕೊಳವೆ ಹಾಕಲು ಎಂಬತ್ತು ಸಾವಿರ ರೂಪಾಯಿಗಳನ್ನು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಗೆ ತುಂಬಿದ್ದು ನಿಜವೇ, ಹಾಗಿದ್ದಲ್ಲಿ ಇನ್ನೂ ಆ ಕೆಲಸ ಆಗದೆ ಇರುವುದಕ್ಕೆ ಕಾರಣಗಳೇನು ?

ಈ) ಸಾರ್ವಜನಿಕ ಹಿತದೃಷ್ಟಿಯಿಂದ ತೀವ್ರ ಕ್ರಮ ತೆಗೆದುಕೊಂಡು ಕೆಲಸ ಮುಗಿಸಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ ?

ಶ್ರೀ ಎ.ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರ, ನಗರಾಭಿವೃದ್ಧಿ ಮತ್ತು ಆಹಾರ ಸಚಿವರು).—

ಅ) ನಿಜ, ದಿನಾಂಕ ೭-೨-೧೯೮೧.

ಆ) ಈಗ ಎಲ್ಲಾ ಯೋಜಿಸಿದ ಕೆಲಸಗಳು ೧೧.೪೨ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಪೂರ್ಣಗೊಳಿಸಲಾಗಿದೆ.

ಇ) ನಿಜ. ಆರ್. ಸಿ. ಸಿ. ಪೈಪ್ ಬದಲಾಗಿ ೩೦೦ ಮೀ. ಮೀ. ವ್ಯಾಸದ ೧೬೫ ಮೀಟರ್ ಉದ್ದದ ಬೀಡು ಕಬ್ಬಿಣದ ಕೊಳವೆಗಳನ್ನು ಮೇಲ್ಮಟ್ಟದ ಜಲಸಂಗ್ರಹಾಗಾರದಿಂದ ನೀರನ್ನು ಬಿಟ್ಟಾಗ ಈಗ ಹಾಳಿ ಇರುವ ಆರ್ ಸಿ. ಸಿ. ಪೈಪ್‌ಗಳು ಒಡೆದು ಹೋದರೆ ಬದಲಾಯಿಸಬೇಕಾಗುವುದೆಂದು ೮೪,೫೮೫.೦೦ ರೂ.ಗಳಿಗೆ ಏರಿದಿಸಲಾಯಿತು. ಆದರೆ ಜಲಸಂಗ್ರಹಾಗಾರವನ್ನು ದಿನಾಂಕ ೮-೩-೧೯೮೭ ರಂದು ಚಾಲ್ತಿಗೊಳಿಸಿದಾಗ ಆರ್. ಸಿ. ಸಿ. ಪೈಪುಗಳನ್ನು ಈವರೆಗೂ ಉಪಯೋಗಿಸಿಲ್ಲ.